# ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂರವಾಣಿ ಸಂಖ್ಯೆ :08172-267345, 235028, 263345 ಫ್ಯಾಕ್ಸ್ ಸಂಖ್ಯೆ: 08172-265418

website:www.hassan.nic.in Email: dcoffice.hassan@gmail.com


ನಂ. CKM-SKP 1/2016-17 ದಿನಾಂಕ : 18-07-2017

ನಮೂನೆ-01

ಭಾಗ-ಎ

## ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆ

(ನಿಯಮ 3(6)ನ್ನು ನೋಡಿ)

ಚಿಕ್ಕಮಗಳೂರು-ಸಕಲೇಶಪುರ ರೈಲ್ವೆ ಯೋಜನೆಯ ರೈಲ್ವೆ ಮಾರ್ಗ ನಿರ್ಮಾಣಕ್ಕಾಗಿ ಉಪ ಮುಖ್ಯ ಅಭಿಯಂತರರು (ಕನ್‌ಸ್ಟ್ರಕ್ಷನ್), ನೈರುತ್ಯ ರೈಲ್ವೆ, ಕಂಟೋನ್ಮೆಂಟ್, ಬೆಂಗಳೂರುರವರಿಗೆ ಈ ಕೆಳಗಿನ ಕೋಷ್ಟಕದಲ್ಲಿನ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ 26 ಗ್ರಾಮಗಳ ಮತ್ತು ಸಕಲೇಶಪುರ ತಾಲ್ಲೂಕಿನ 8 ಗ್ರಾಮಗಳ ಒಟ್ಟಾರೆ 34 ಗ್ರಾಮಗಳ 536-26 ಎಕರೆ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಚಿಕ್ಕಮಗಳೂರು-ಸಕಲೇಶಪುರ ರೈಲ್ವೆ ಮಾರ್ಗ ನಿರ್ಮಾಣಕ್ಕಾಗಿ ಅತ್ಯಗತ್ಯವಾಗಿ ಬೇಕಾಗಿರುವುದೆಂದು ಜಿಲ್ಲಾಧಿಕಾರಿ ಹಾಸನರವರು ಭಾವಿಸಿರುವುದರಿಂದ " ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ, (ಕರ್ನಾಟಕ) ನಿಯಮಗಳು-2015"ರ ನಿಯಮ 3(6) ರಂತೆ ಈ ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

### ಭೂಸ್ವಾಧೀನವಾಗುವ ಜಮೀನಿನ ವಿವರಗಳು

| ಕ್ರ ಸಂ | ತಾಲೂಕು | ಹೋಬಳಿ | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ಭೂಸ್ವಾಧೀನ ಪ್ರಸ್ತಾವನೆಯ ವಿಸ್ತೀರ್ಣ |
|---|---|---|---|---|---|
| 1. | ಬೇಲೂರು | ಕಸಬಾ | ಚಿನ್ನೇನಹಳ್ಳಿ | ಗೊಟ್ರವಳ್ಳಿ | 26-08½ |
| 2. | " | " | ಸನ್ಯಾಸಿಹಳ್ಳಿ | ಕೆರಲೂರು | 24-18¼ |
| 3 | " | " | ಸನ್ಯಾಸಿಹಳ್ಳಿ | ಲಕ್ಷ್ಮೀಪುರ | 4-26½ |
| 4 | " | " | ಸನ್ಯಾಸಿಹಳ್ಳಿ | ಚನ್ನಾಪುರ | 1-36 |
| 5 | " | " | ಪುರಸಭೆ | ಬೇಲೂರು | 13-39 |
| 6 | " | " | ಸನ್ಯಾಸಿಹಳ್ಳಿ | ಕಾಚೇಹಳ್ಳಿ | 11-22 |

| | | | | | |
|---|---|---|---|---|---|
| 7 | ” | ” | ದೊಡ್ಡಮೇದೂರು | ಎಸ.ಬೊಮ್ಮಡಿಹಳ್ಳಿ | 12–16 |
| 8 | ” | ” | ದೊಡ್ಡಮೇದೂರು | ಕಬ್ಬಿನ ಮನೆ | 6–11½ |
| 9 | ” | ” | ದೊಡ್ಡಮೇದೂರು | ದೊಡ್ಡಮೇದೂರು | 22–24 |
| 10 | ” | ” | ದೊಡ್ಡಮೇದೂರು | ಚಿಕ್ಕಮೇದೂರು | 15–20 |
| 11 | ” | ” | ಯಮಸಂಧಿ | ಯಮಸಂಧಿ | 11–00 |
| 12 | ” | ” | ಐರವಳ್ಳಿ | ಐ. ಹುಣಸಕೆರೆ | 18–28½ |
| 13 | ” | ” | ಯಮಸಂಧಿ | ಅಗಸರಹಳ್ಳಿ | 5–32 |
| 14 | ” | ಬಿಕ್ಕೋಡು | ಕುಶಾವರ | ಬಕ್ರವಳ್ಳಿ | 4–09½ |
| 15 | ” | ” | ಕುಶಾವರ | ಅರಕರವಳ್ಳಿ | 13–15 |
| 16 | ” | ” | ಬಿಕ್ಕೋಡು | ಹುಸ್ಕೂರು | 34–30 |
| 17 | ” | ” | ಬಿಕ್ಕೋಡು | ಮತ್ತಾವರ | 21–35 |
| 18 | ” | ” | ಲಕ್ಕುಂದ | ಲಕ್ಕುಂದ | 31–02½ |
| 19 | ” | ” | ಲಕ್ಕುಂದ | ಇರಕರವಳ್ಳಿ | 13–39 |
| 20 | ” | ” | ಲಕ್ಕುಂದ | ಅಂಕಿಹಳ್ಳಿ | 8–14 |
| 21 | ” | ” | ಕುಶಾವರ | ತಗರೆ | 27–30 |
| 22 | ” | ” | ಕುಶಾವರ | ಖರಡಗೋಡು | 10–37 |
| 23 | ” | ” | ಬಿಕ್ಕೋಡು | ಚೋಕನಹಳ್ಳಿ | 7–37½ |
| 24 | ” | ” | ಕುಶಾವರ | ಚೌಡನಹಳ್ಳಿ | 21–21½ |
| 25 | ” | ಅರೇಹಳ್ಳಿ | ಚಿನ್ನೇನಹಳ್ಳಿ | ಮರೂರು | 1–26 |
| 26 | ” | ” | ದೊಡ್ಡಮೇದೂರು | ಮಧ್ವಾಪುರ | 7–04 |
| 27 | ಸಕಲೇಶಪುರ | ಕಸಬಾ | ಹಲಸುಲಿಗೆ | ಹಸಿಡೆ | 8–14 |
| 28 | ” | ” | ಹಲಸುಲಿಗೆ | ಮಾಸವಳ್ಳಿ | 32–25¼ |
| 29 | ” | ” | ಹಲಸುಲಿಗೆ | ಹಲಸುಲಿಗೆ | 32–31½ |
| 30 | ಸಕಲೇಶಪುರ | ಬೆಳಗೋಡು | ಬೆಳಗೋಡು | ಶಿಡಿಗಳಲೆ | 9–15 |
| 31 | ” | ” | ಬೆಳಗೋಡು | ಸುಂಡಹಳ್ಳಿ | 7–01 |
| 32 | ” | ” | ಬೆಳಗೋಡು | ಹೆಬ್ಬನಹಳ್ಳಿ | 26–14 |
| 33 | ” | ” | ಬೆಳಗೋಡು | ಮೂಗಲಿ | 14–17 |
| 34 | ” | ” | ಬೆಳಗೋಡು | ಲಕ್ಕುಂದ | 26–05 |
| | | | | | **536–26** |
| | | | | | |

“ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ ಕಾಯಿದೆ –2013”ರ ಕಲಂ 4 ರಿಂದ 9 ಹಾಗೂ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ,

(ಕರ್ನಾಟಕ) ನಿಯಮಗಳು–2015"ರ ನಿಯಮ 3 ರಿಂದ 15 ರಂತೆ ಭೂ ಸ್ವಾಧೀನವಾಗುವ ಜಮೀನುಗಳು ಹಾಗೂ ಈ ಪರಿಣಾಮ ನಿರ್ಧರಣೆ ಮಾಡಲು ಜಿ.ಜಿ.ವಿ **ಎಜುಕೇಷನ್ & ರೂರಲ್ ಡೆವಲಪ್‌ಮೆಂಟ್ ಸೊಸೈಟಿ & ಜಿ.ಜಿ.ವಿ ಎಂಟರ್ ಪ್ರೈಸಸ್, ತುಮಕೂರು–572 106** ರವರನ್ನು ನಿಯೋಜಿಸಲಾಗಿದೆ.

ಸದರಿಯವರು ತಮ್ಮ ತಂಡದೊಂದಿಗೆ ಈ ಮೇಲ್ಕಾಣಿಸಿದ ಗ್ರಾಮಗಳಿಗೆ ದಿನಾಂಕ 18-07-2017 ರಿಂದ 17-10-2017 ರವರೆಗೆ (ತಾತ್ಕಾಲಿಕ ವೇಳಾಪಟ್ಟಿ) ಭೇಟಿ ನೀಡಿ ವಿವರಗಳನ್ನು ಕಲೆ ಹಾಕಿ ಅಧ್ಯಯನ ನಡೆಸಲಿದ್ದಾರೆ. ಈ ಅಧ್ಯಯನದ ಭಾಗವಾಗಿ ಸಂಬಂಧಿಸಿದ ಗ್ರಾಮಗಳ ಜಮೀನುಗಳ ಭೂ ಮಾಲೀಕರು, ರೈತರು, ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಗ್ರಾಮ ಸಭೆಗಳು, ರೈತರೊಂದಿಗೆ ಮುಖಾಮುಖಿ ಸಂವಾದ ನಡೆಸಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ.

ಸದರಿ ಭೂ ಸ್ವಾಧೀನದ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು/ ಅಭಿಪ್ರಾಯಗಳು ಇದ್ದಲ್ಲಿ ಗ್ರಾಮ ಸಭೆಯ ದಿನದಂದು ಅದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ **ಜಿ.ಜಿ.ವಿ ಎಜುಕೇಷನ್ & ರೂರಲ್ ಡೆವಲಪ್‌ಮೆಂಟ್ ಸೊಸೈಟಿ & ಜಿ.ಜಿ.ವಿ ಎಂಟರ್ ಪ್ರೈಸಸ್, ತುಮಕೂರು–572 106** ರವರಿಗೆ ನೀಡುವುದು. ಈ ಸಮಯದ ನಂತರ ಬಂದ ಆಕ್ಷೇಪಣೆಗಳು ಹಾಗೂ ಈ ಮೊದಲೇ ಸಲ್ಲಿಸಲಾದ ಆಕ್ಷೇಪಣೆಗಳು ಸಮಂಜಸವಾಗಿಲ್ಲದಿದ್ದಲ್ಲಿ, ಆಧಾರ ರಹಿತವಾಗಿದ್ದಲ್ಲಿ ಯಾವುದೇ ಚರ್ಚೆ ಇಲ್ಲದೆ ತಿರಸ್ಕರಿಸಲಾಗುವುದು ಮತ್ತು ಯಾವುದೇ ರೀತಿಯಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ. ಭೂ ಸ್ವಾಧೀನಕ್ಕೆ ಸಂಬಂಧಿಸಿದ ಜಮೀನುಗಳ ವಿವರಗಳನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹಾಸನ, ಚಿಕ್ಕಮಗಳೂರು–ಸಕಲೇಶಪುರ ರೈಲ್ವೆ ಯೋಜನೆ. ಜಿಲ್ಲಾಧಿಕಾರಿಗಳ ಕಛೇರಿ ಹಾಸನರವರ ಕಛೇರಿಯಲ್ಲಿ, ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು. ಇಲ್ಲವಾದಲ್ಲಿ ಗ್ರಾಮ ಸಭೆಯ ದಿನದಂದು ಗ್ರಾಮ ಸಭೆಯಲ್ಲಿ ಪರಿಶೀಲಿಸಬಹುದು.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಅಪರ ಜಿಲ್ಲಾಧಿಕಾರಿಗಳು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಹಾಸನರವರ ಪೂರ್ವ ಲಿಖಿತ ಅನುಮತಿಯಿಲ್ಲದೆ ಸದರಿ ಜಮೀನುಗಳನ್ನು ವಿಲೇ ಮಾಡುವ ಒಪ್ಪಂದದ ಕ್ರಯ, ಕರಾರು , ಭೋಗ್ಯ, ಲೀಜ್, ಅದಲು–ಬದಲು ವಗೈರೆ ಮಾಡುವಂತಿಲ್ಲ. ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗಧಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಈ ಮೇಲ್ಕಂಡ ಸಾಮಾಜಿಕ ಪರಿಣಾಮ ನಿರ್ಧರಣೆಯ ಸರ್ಕಾರವು ನೀಡಿದ ನಿರ್ದೇಶನ, ಸುತ್ತೋಲೆ ಹಾಗೂ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ ಕಾಯಿದೆ –2013"ರ ಅಧ್ಯಾಯ–02 ಕಲಂ 04ರಿಂದ 09 ಹಾಗೂ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ, (ಕರ್ನಾಟಕ) ನಿಯಮಗಳು–2015"ರ ಅಧ್ಯಾಯ 02 ರ ನಿಯಮ 03 ರಿಂದ 15 ರಂತೆ ನಡೆಯುತ್ತದೆ. ಈ ಅಧ್ಯಯನದ ಮೇಲೆ ಯಾವುದೇ ವ್ಯಕ್ತಿ ಯಾವುದೇ ರೀತಿಯ ಪ್ರಭಾವ ಬೀರುವುದಾಗಲಿ, ಪ್ರಲೋಭನೆ ಉಂಟುಮಾಡುವುದಾಗಲಿ ಮಾಡುವಂತಿಲ್ಲ, ಯಾವುದೇ ರೀತಿಯ ಪ್ರಭಾವ ಬೀರಿದರೆ, ಪ್ರಲೋಭನೆ ಉಂಟು ಮಾಡಿದರೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಗ್ರಾಮ ಸಭೆಗಳು, ಭೂ ಮಾಲೀಕರೊಂದಿಗಿನ ಸಮಾಲೋಚನೆಗಳ ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು. ನಂತರ, ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ಸಂಗ್ರಹಿಸಲಾಗುವುದು. ನಂತರ ವಿಶೇಷ ತಜ್ಞರ ತಂಡಕ್ಕೆ ಕಳುಹಿಸಿ, ಅವರಿಂದ ಯಾವುದಾದರೂ ಶಿಫಾರಸ್ಸುಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಿ ಅಂತಿಮವಾಗಿ ಎಲ್ಲಾ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಸಾಮಾಜಿಕ ಪರಿಣಾಮ ನಿರ್ಧರಣೆ (ಎಸ್.ಐ.ಎ) ವರದಿ ಹಾಗೂ ಸಾಮಾಜಿಕ ಪರಿಣಾಮ ವ್ಯವಸ್ಥಾಪನಾ ಯೋಜನೆಯನ್ನು (ಎಸ್.ಐ.ಎಂ.ಪಿ) ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಯಾವುದಾದರೂ ಅನಿವಾರ್ಯ ಅಥವಾ ಇತರೆ ಕಾರಣಗಳಿಂದ ಗ್ರಾಮ ಸಭೆಯ ದಿನಾಂಕಗಳನ್ನು ಬದಲಾಯಿಸಲು ಮತ್ತು ಬೇರೆ ದಿನಾಂಕಗಳನ್ನು ನಿಗಧಿಪಡಿಸಲು ಈ ಕೆಳಗೆ ಸಹಿ ಮಾಡಿದ ಅಧಿಕಾರಿ ಅಧಿಕಾರ ಹೊಂದಿರುತ್ತಾರೆ.

ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ, ಹಾಸನ
8/9/7/17